ಓ.ಎಸ್. ನಂಃ 20/2022

ಸಿ.ಡಬ್ಲ್ಯೂಃ 1

ದಿನಾಂಕ 16.07.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ವಿನೀತ್ ಎಲ್ |
| ತಂದೆಯ ಹೆಸರುಃ | ಎನ್.ಬಿ ಲಿಂಗಯ್ಯ |
| ವಯಸ್ಸುಃ | 37 ವರ್ಷ |
| ಉದ್ಯೋಗಃ | **AEE, RDPR, Bengaluru** |
| ವಾಸ ಸ್ಥಳಃ | ಬೆಂಗಳೂರು |

**ಮುಖ್ಯ ವಿಚಾರಣೆ ಪ್ರತಿವಾದಿಯ ಪರ: ಶ್ರೀ ಎಲ್.ವಿ.ಆರ್ ವಕೀಲರಿಂದಃ**

1. ಸಾಕ್ಷಿಗೆ ಈಗ ತಾವು ನ್ಯಾಯಾಲಯಕ್ಕೆ ಸಲ್ಲಿಸಿದ ವರದಿ ಮತ್ತು ಅದರ ಲಗತ್ತುಗಳಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಶಾನೆ-ಸಿ-1 ರಿಂದ ನಿಶಾನೆ-ಸಿ-4 ಎಂದು ಗುರುತಿಸಲಾಯಿತು. ವಾದಿಯ ಒತ್ತುವರಿಯಾದ ಜಾಗವನ್ನು ತೋರಿಸಿ ವರದಿಯನ್ನು ಸಲ್ಲಿಸುವಂತೆ ನನಗೆ ನ್ಯಾಯಾಲಯದಿಂದ ಆದೇಶವಾಗಿತ್ತು. ನನಗೆ ಈ ದಾವೆಯ facts ಬಗ್ಗೆ ಯಾವುದೇ ಮಾಹಿತಿ ಇಲ್ಲ.

**( ಈ ಹಂತದಲ್ಲಿ ಪ್ರತಿವಾದ ಪರ ವಕೀಲರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದ್ದು-ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಲ್.ವಿ.ಆರ್ ವಕೀಲರಿಂದ ಃ**

1. ನಿವೇನಾದರೂ ವಾದಿ ಮತ್ತು ಪ್ರತಿವಾದಿಯರ ಆಸ್ತಿಗಳನ್ನು ಅಳತೆ ಮಾಡಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ವಾದಿಯ ಆಸ್ತಿಯನ್ನು ಅಳತೆ ಮಾಡಿದ್ದು,

ಪ್ರತಿವಾದಿಯರ ಆಸ್ತಿಯನ್ನು ಅಳತೆ ಮಾಡಲೆಂದು ಹೋದಾಗ ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಜಗಳ ನಡೆದ ಕಾರಣ ನನಗೆ ಪ್ರತಿವಾದಿಯರ ಆಸ್ತಿಯನ್ನು ಅಳೆಯಲು ಆಗಿರುವುದಿಲ್ಲ ಆದ್ದರಿಂದ ನಾನು ಪ್ರತಿವಾದಿಯರ ಆಸ್ತಿಯನ್ನು ಅಳೆದಿರುವುದಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ.

2. ಪ್ರತಿವಾದಿಯರ ಆಸ್ತಿಯನ್ನು ನಾನು ಅಳೆಯದ ಕಾರಣ ಯಾರ ಆಸ್ತಿಯಲ್ಲಿ ಎಷ್ಟು ವಿಸ್ತೀರ್ಣದ ಜಮೀನು ಒತ್ತುವರಿಯಾಗಿರುತ್ತದೆ ಎಂದು ನನಗೆ ಹೇಳಲು ಸಾಧ್ಯವಿಲ್ಲ ಎಂದರೆ ಸರಿ. ಪ್ರತಿವಾದಿಯರ ಆಸ್ತಿಯನ್ನು ಅಳತೆ ಮಾಡಲೆಂದು ನಾನು ಹೋದಾಗ ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಜಗಳ ನಡೆದ ಕಾರಣ ನನಗೆ ಪ್ರತಿವಾದಿಯರ ಆಸ್ತಿಯನ್ನು ಅಳೆಯಲು ಆಗಿರುವುದಿಲ್ಲ ಆದ್ದರಿಂದ ನಾನು ಪ್ರತಿವಾದಿಯರ ಆಸ್ತಿಯನ್ನು ಅಳೆದಿರುವುದಿಲ್ಲ ಎಂದು ನನ್ನ ವರದಿಯಲ್ಲಿ ನಾನು ಹೇಳಿರುವುದಿಲ್ಲ. ಪ್ರತಿವಾದಿಯರ ಆಸ್ತಿಯನ್ನು ಅಳತೆ ಮಾಡಲೆಂದು ನಾನು ಹೋದಾಗ ಅಲ್ಲಿ ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಜಗಳ ನಡೆದ ಕಾರಣ ನನಗೆ ಅಳತೆ ಕಾರ್ಯ ನಡೆಸಲು ಪೋಲಿಸು ನೆರವು ನೀಡಬೇಕೆಂದು ಕೋರಿ ನಾನು ನ್ಯಾಯಾಲಯಕ್ಕೆ ಯಾವುದೇ ನಿವೇದನೆಯನ್ನು ಸಲ್ಲಿಸಿರುವುದಿಲ್ಲ.

3. 1ನೇ ಪ್ರತಿವಾದಿಯು ನನಗೆ ನೀಡಿದ್ದ ಸೂಚನಾ ಪತ್ರ (Memo of instruction) ಗೆ ನಾನು ಖಂಡಿಕಾವಾರು ಉತ್ತರವನ್ನು (Parawise remarks) ಅನ್ನು ನೀಡಿರುವುದಿಲ್ಲ ಎಂದರೆ ಸರಿ. ನಿಶಾನೆ.ಸಿ-1 ರಲ್ಲಿ ದಕ್ಷಿಣ ದಿಕ್ಕಿಗೆ ಪ್ರತಿವಾದಿಯರ ಮನೆ ಇರುವುದಾಗಿ ನಾನು ನಮೂದಿಸಿದ್ದು, ನಾನು ಪ್ರತಿವಾದಿಯರ ಆಸ್ತಿಯನ್ನು ನಾನು ಅಳೆಯದ ಕಾರಣ ಯಾರ ಆಸ್ತಿಯಲ್ಲಿ ಎಷ್ಟು ವಿಸ್ತೀರ್ಣದ ಜಮೀನು ಒತ್ತುವರಿಯಾಗಿರುತ್ತದೆ ಎಂದು ನನಗೆ ಹೇಳಲು ಸಾಧ್ಯವಿಲ್ಲ ಎಂದರೆ ಸರಿ. ಆದ್ದರಿಂದ ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿ ಅಪೂರ್ಣವಾಗಿದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಒಂದು ವಾರದ ಕಾಲಾವಕಾಶ ಕೊಟ್ಟರೆ ನಾನು ಪೋಲಿಸ್ ಸಹಾಯದಿಂದ ಇನ್ನೊಮ್ಮೆ ಸ್ಥಳ ತನಿಖೆ ಮಾಡಿ ನನ್ನ ಪೂರ್ಣ ವರದಿಯನ್ನು ಸಲ್ಲಿಸುತ್ತೇನೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

**ಪಾಟೀ ಸವಾಲುಃ ವಾದಿಯರ ಪರ ವಕೀಲರಿಂದ ಃ**

ವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲಿಗಾಗಿ ಸಮಯಾವಕಾಶ ನೀಡಲು ಯಾವುದೇ ಸಕಾರಣಗಳು ಇಲ್ಲದಿರುವುದರಿಂದ ವಾದಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**